**ಮೂರನೆ ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ. ನ್ಯಾಯಾಲಯ ಕನಕಪುರ**

**ಸಿ.ಸಿ.ನಂಃ 127/2015**

ಪಿರ್ಯಾದುದಾರರುಃ ಸಾತನೂರು ಪೊಲೀಸರು.

ವಿರುದ್ದ

ಆರೋಪಿತರು : ಹೊನ್ನಯ್ಯ
ಬಿನ್ ಚಿಕ್ಕವೆಂಕಟಮ್ಮ,
ವಯಸ್ಸು 49 ವರ್ಷಗಳು,
ವಾಸಃ ಚುಂಚಿ ಕಾಲೋನಿ,
ಉಯ್ಯಂಬ ಹೋಬಳಿ,
ಕನಕಪುರ ತಾಲ್ಲೂಕು,
ರಾಮನಗರ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ದಾಖಲಿಸಿಕೊಂಡ ಆಪಾದಿತನ ಹೇಳಿಕೆ**

ಪ್ರಶ್ನೆ-1 ಈ ನ್ಯಾಯಾಲಯದಲ್ಲಿ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

ಆರೋಪಿಃ ಉತ್ತರಃ

ಪ್ರಶ್ನೆ-2) ಪ್ರಾಸಾ-1/ರವಿಕುಮಾರ್ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುದೇನೆಂದರೇ, ದಿನಾಂಕಃ 23.03.2014 ಚಾಸಾ 1 ರಿಂದ 4 ರವರು ಹಾಗೂ ತಾನು ಗಸ್ತು ಹೋಗಿದ್ದ ಸಮಯದಲ್ಲಿ ಚುಂಚಿಕಾಲೋನಿಯ ಗ್ರಾಮದಲ್ಲಿ ಹೊನ್ನಯ್ಯರವರು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಚಾಸಾ 1 ರವರಿಗೆ ಬಂದ ಮೇರೆಗೆ ಚುಂಚಿಕಾಲೋನಿಗೆ ನಾವೆಲ್ಲರೂ ಹೋಗಿದ್ದು, ಸಿಬ್ಬಂದಿಗಳು ಮತ್ತು ಪಂಚಾಯಿತಿದಾರರು ಸ್ಥಳಕ್ಕೆ ಹೋದ ಸಮಯಕ್ಕೆ ಒಬ್ಬ ವ್ಯಕ್ತಿ ತಮ್ಮನ್ನು

ನೋಡಿ ಓಡಿಹೋಗಿದ್ದು, ನಂತರ ಅಲ್ಲಿ ಅಕ್ಕಪಕ್ಕದವರನ್ನು ವಿಚಾರಿಸಿದಾಗ ಅವರ ಹೆಸರು ಹೊನ್ನಯ್ಯ ಎಂದು ತಿಳಿದುಬಂದಿದ್ದು, ಆಗ ತಾನು, ಚಾಸಾ 1 ಮತ್ತು ಸಿಬ್ಬಂದಿ, ಪಂಚರುಗಳು ಅಂಗಡಿಯ ಒಳಗೆ ಹೋಗಿ ಪರಿಶೀಲಿಸಿದಾಗ ಅಲ್ಲಿ ಹೆವಾರ್ಡ್ಸ್ ವಿಸ್ಕಿ 90 ಪ್ಯಾಕೇಟ್ ಗಳು ಇರುವುದು ಕಂಡುಬಂದಿದ್ದು, ಅದರ ಬೆಲೆಯು ಒಂದು ಪ್ಯಾಕೆಟ್ 24.15/- ಇದ್ದು, ಅವುಗಳನ್ನು ವಶಪಡಿಸಿಕೊಂಡು ಪಂಚನಾಮೆಯನ್ನು ಪಂಚರ ಸಮಕ್ಷಮ ಜರುಗಿಸಿ, ಠಾಣೆಗೆ ಹಿಂದಿರುಗಿರುತ್ತೇವೆ, ಆ ದಿನ ತಮ್ಮನ್ನು ನೋಡಿ ಓಡಿ ಹೋದ ಅಸಾಮಿಯೇ ನ್ಯಾಯಾಲಯದ ಮುಂದಿರುವ ಆರೋಪಿ ಎಂದು ನಿಮ್ಮನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ಏನು ಹೇಳುವಿರಿ?

ಆರೋಪಿಃ ಉತ್ತರಃ ಸುಳ್ಳು

ಪ್ರಶ್ನೆ-3) ಪ್ರಾಸಾ-2/ ಸುರೇಶ್ ತಮ್ಮ ಸಾಕ್ಷ್ಯದಲ್ಲಿ ನುಡಿಯುದೇನೆಂದರೇ, ದಿನಾಂಕ.23.03.2014 ರಂದು ಮದ್ಯಾಹ್ನ 3 ಗಂಟೆಗೆ ತಾನು ಠಾಣಾ ಸರಹದ್ದಿನ ಏಳಗಳ ಬಳಿ ಗಸ್ತಿನಲ್ಲಿದ್ದಾಗ, ಬಂದ ವಿಚಾರ ಏನೆಂದರೆ ಚುಂಚಿಕಾಲೋನಿಯಲ್ಲಿ ಆರೋಪಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಬಾಬ್ತಿ ಬಂದಿದ್ದು ಸದರಿ ವಿಚಾರವನ್ನು ಚಾಸಾ-2 ರಿಂದ 4 ರವರಿಗೆ ಸದರಿ ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು ಬರುವಂತೆ ತಿಳಿಸಿದ್ದು, ಆ ಮೇರೆಗೆ ಚಾಸಾ-6 ರಿಂದ 8 ರವರನ್ನು ಸ್ಥಳಕ್ಕೆ ಪಂಚರಾಗಿ ಕರೆದುಕೊಂಡು ಬಂದಿದ್ದು, ಮದ್ಯಾಹ್ನ 3.30 ಪಂಚರಿಗೆ ಮತ್ತು ಸಿಬ್ಬಂದಿಯವರಿಗೆ ಮಾಹಿತಿ ತಿಳಿಸಿ, ದಾಳಿ ಮಾಡಲಾಗಿ ಅಂಗಡಿಯಿಂದ ಒಬ್ಬ ಅಸಾಮಿ ಓಡಿ ಹೋಗಿದ್ದು, ಪಂಚರ ಸಮಕ್ಷಮ ಸದರಿ ಅಂಗಡಿಯನ್ನು ಅಜಾಮಯಿಸಿ ಮಾಡಲಾಗಿ ಅಲ್ಲಿ 90 ಎಂಎಲ್ ನ 90 ಹೈವಾರ್ಡ ವಿಸ್ಕಿ ಪ್ಯಾಕೇಟ್ ಗಳು ದೊರೆತಿದ್ದು, ಗಂಟೆಗೆ ಸದರಿ ವಿಚಾರವಾಗಿ ಸ್ಥಳದಲ್ಲಿ ಮದ್ಯಾಹ್ನ 3.30 ರಿಂದ 4.15 ರವರೆಗೆ ಪಂಚನಾಮೆ ಕ್ರಮ ಜರುಗಿಸಿ, ಸದರಿ ಸ್ಥಳದಲ್ಲಿ ಅಕ್ಕಪಕ್ಕದವರನ್ನು ವಿಚಾರಿಸಲಾಗಿ, ಓಡಿ

ಹೋದವನ ಬಗ್ಗೆ ಕೇಳಲಾಗಿ ಆತನ ಹೆಸರು ಹೊನ್ನಯ್ಯ ಬಿನ್ ಚಿಕ್ಕವೆಂಕಟ ತಿಳಿದುಬಂದಿದ್ದು, ಠಾಣೆಗೆ ಬಂದು ವರದಿ ತಯಾರಿಸಿ ಸಂಜೆ 6.15 ಗಂಟೆ ಸಮಯದಲ್ಲಿ ಮೊಕದ್ದಮೆ ಸಂಖ್ಯೆ 70/2014 ಕಲಂ 32, 34 ಕೆಇ ಆಕ್ಟ್ ಅಡಿಯಲ್ಲಿ ಪ್ರಕರಣ ದಾಖಲಿಸಿ ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡು, ಅದೇ ದಿನ ಚಾಸಾ-2 ರಿಂದ 8 ರವರ ಹೇಳಿಕೆಯನ್ನು ದಾಖಲಿಸಿಕೊಂಡು ದಿ:29.03.2014 ರಂದು ಅಮಾನತು ಪಡಿಸಿಕೊಂಡ ಮಾಲಿನಲ್ಲಿ ಒಂದು ವಸ್ತುವನ್ನು ಎಫ್ ಎಸ್ ಎಲ್ ಗೆ ಕಳುಹಿಸಲು ನ್ಯಾಯಾಲಯದಿಂದ ಅನುಮತಿಯನ್ನು ಕೇಳಿರುದ್ದು, ದಿ:03.04.2014 ರಂದು ಮಾನ್ಯ ನ್ಯಾಯಾಲಯದಿಂದ ಅನುಮತಿ ಬಂದ ಮೇರೆಗೆ ಪಂಚರಾದ ಚಾಸಾ-9 ಮತ್ತು 10 ರವರ ಸಮಕ್ಷಮದಲ್ಲಿ 11.40 ರಿಂದ 12.00 ಗಂಟೆಯವರೆಗೆ ಪಂಚನಾಮೆ ಕ್ರಮ ಜರುಗಿಸಿ ಅಮಾನತು ಪಡಿಸಿಕೊಂಡ ಮಾಲಿನಲ್ಲಿ 1 ಹೆವಾರ್ಡ್ಸ್ ವಿಸ್ಕಿಯ ಪ್ಯಾಕೇಟ್ ನ್ನು ಎಫ್ ಎಸ್ ಎಲ್ ಗೆ ಕಳುಹಿಸುವ ಸಂಬಂಧ ಸಿ ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತು ಪಡಿಸಿಕೊಂಡು ದಿ:11.04.2014 ರಂದು ಅಮಾನತು ಪಡಿಸಿಕೊಂಡ ಎಫ್ ಎಸ್ ಎಲ್ ಮಾಲನ್ನು ಪಿಸಿ 160 ಕಾವೇರಪ್ಪರವರ ಮುಖಾಂತರ ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟು ದಿ:22.04.2014 ರಂದು ಉಳಿದ ಮಾಲುಗಳನ್ನು ಅಬಕಾರಿ ಇಲಾಖೆಗೆ ನೀಡಲು ಅಬಕಾರಿ ಅಧಿಕಾರಿಗಳಿಗೆ ಅನುಮತಿ ಪತ್ರ ನೀಡಿದ್ದು, ದಿ:03.05.2014 ರಂದು ಅಬಕಾರಿ ಆಯುಕ್ತರಿಂದ ಅನುಮತಿ ಬಂದ ಮೇರೆಗೆ ಉಳಿದ 89 ಹೆವಾರ್ಡ್ಸ್ ವಿಸ್ಕಿ ಪ್ಯಾಕೇಟ್ ಗಳನ್ನು ಅಬಕಾರಿ ನಿರೀಕ್ಷಕರು, ಕನಕಪುರ ರವರಿಗೆ ನೀಡಿದ್ದು, ದಿ:04.06.2014 ರಂದು ವರ್ಗಾವಣೆಯಾದ ಕಾರಣ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-12 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ಏನು ಹೇಳುವಿರಿ?

ಆರೋಪಿಃ ಉತ್ತರಃ ಸುಳ್ಳು

ಪ್ರಶ್ನೆ-4) ಪ್ರಾಸಾ-3/ಗಣೇಶ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೇ, ದಿನಾಂಕ.23.03.2014 ರಂದು ಮದ್ಯಾಹ್ನ 3 ಗಂಟೆ ಸಮಯಕ್ಕೆ ತಾನು ಪೊಲೀಸ್ ಠಾಣೆಯಲ್ಲಿರುವಾಗ ಚಾಸಾ-1 ರವರು ಫೋನ್ ಕರೆ ಮಾಡಿ ಚುಂಚಿಕಾಲೋನಿಯ ಹೊನ್ನಯ್ಯ ಮತ್ತು ವೆಂಕಟೇಶ್ ರವರ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂಬ ಮಾಹಿತಿ ಬಂದ ಮೇರೆಗೆ ದಾಳಿ ಮಾಡಬೇಕೆಂದು ಇಬ್ಬರು ಪೊಲೀಸರ ಜೊತೆ ದೊಡ್ಡಾಲಹಳ್ಳಿಗೆ ಬನ್ನಿ ಎಂದು, ತಾವು ಅದೇ ಗ್ರಾಮದಲ್ಲಿ ದಸ್ತು ಮಾಡುತ್ತಿರುವುದಾಗಿ ತಿಳಿಸಿದ್ದು, ಆಗ ತಾನು ಚಾಸಾ-3 ಮತ್ತು 4 ರವರನ್ನು ಕರೆದುಕೊಂಡು ದೊಡ್ಡಾಲಹಳ್ಳಿ ಗ್ರಾಮಕ್ಕೆ ಮೋಟಾರ್ ಸೈಕಲ್ ನಲ್ಲಿ ಹೋಗಿದ್ದು, ದೊಡ್ಡಾಲಹಳ್ಳಿ ಸರ್ಕಲ್ ನಲ್ಲಿದ್ದ, ಚಾಸಾ-6 ರಿಂದ 8 ರವರನ್ನು ಪಂಚರಾಗಿ ಬರುವಂತೆ ಕೇಳಿಕೊಂಡು ಅಷ್ಟರಲ್ಲಿ ಚಾಸಾ-1 ರವರು ಕೆಎ-42-ಜಿ-74 ಜೀಪಿನಲ್ಲಿ ಸ್ಥಳಕ್ಕೆ ಬಂದಿದ್ದು, ನಂತರ ಎಲ್ಲರೂ ಆರೋಪಿತರ ಅಂಗಡಿಯ ಬಳಿ ಜೀಪನ್ನು ನಿಲ್ಲಿಸಿದಾಗ, ಅಂಗಡಿಯಲ್ಲಿದ್ದ ಒಬ್ಬ ಅಸಾಮಿ ಓಡಿ ಹೋಗಿದ್ದು, ಚಾಸಾ-1 ಹಾಗೂ ನಾವುಗಳು ಪಂಚರೊಟ್ಟಿಗೆ ಅಂಗಡಿಯಲ್ಲಿ ದಾಳಿ ಮಾಡಿದಾಗ ಒಂದು ಬಾಕ್ಸನಲ್ಲಿ 90 ಎಂಎಲ್ ನ 90 ಹೆವಾರ್ಡ್ಸ್ ವಿಸ್ಕಿ ಪೌಚ್ ಗಳು ಇದ್ದು ಅವುಗಳ ಮೇಲೆ 24 ರೂ 15 ಪೈಸೆ ಎಂದು ನಮೂದಾಗಿದ್ದು, ಅವುಗಳನ್ನು ಚಾಸಾ-1 ರವರು ಚಾಸಾ-6 ರಿಂದ 8 ರವರ ಸಮಕ್ಷಮ ಮದ್ಯಾಹ್ನ 3.30 ರಿಂದ 4 ಗಂಟೆಯ ಸಮಯದಲ್ಲಿ ಅಮಾನತು ಪಡಿಸಿಕೊಂಡು ಸ್ಥಳದಲ್ಲಿ ಪಂಚನಾಮೆಯನ್ನು ಬರೆಯಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ಏನು ಹೇಳುವಿರಿ?

ಆರೋಪಿಃ ಉತ್ತರಃ ಸುಳ್ಳು

ಪ್ರಶ್ನೆ-5) ಪ್ರಾಸಾ-4/ಜಯರಾಮ್ ಎಂ.ಕೆ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೇ, ದಿನಾಂಕ: 08.06.2014 ರಂದು ಚಾ.ಸಾ. 1 ರವರಿಂದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ದಿನಾಂಕ:

17.07.2014 ರಂದು ಎಫ್.ಎಸ್. ಎಲ್, ವರದಿಯನ್ನು ಪಡೆದುಕೊಂಡು ತನಿಖೆಯನ್ನು ಮುಕ್ತಾಯಗೊಳಿಸಿ ದೋಷಾರೋಪಣೆ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ಏನು ಹೇಳುವಿರಿ?

ಆರೋಪಿಃ ಉತ್ತರಃ ಸುಳುಳ

ಪ್ರಶ್ನೆ-6) ನಿಮ್ಮ ಪರವಾಗಿ ನೀವು ಏನನ್ನಾದರೂ ಹೇಳುವುದಿದೆಯಾ?

ಆರೋಪಿಃ ಉತ್ತರಃ ಇಲ್ಲಾ

ಪ್ರಶ್ನೆ-7) ನಿಮ್ಮ ಪರ ಪ್ರತಿರಕ್ಷಣೆಯ ಸಾಕ್ಷ್ಯ ವಿಚಾರಣೆ ಮಾಡುವುದಿದೆಯಾ?

ಆರೋಪಿಃ ಉತ್ತರಃ ಹೌದು

ಈ ಮೇಲಿನ ಹೇಳಿಕೆಗಳನ್ನು ಆಪಾದಿತನಿಗೆ ಓದಿ ಹೇಳಿ ಆಪಾದಿತನು ನೀಡಿದ ಉತ್ತರವನ್ನು ಆತ ಹೇಳಿದಂತೆ ಯಥವತ್ತಾಗಿ ದಾಖಲಿಸಿದೆ ಎಂದು ದೃಢೀಕರಿಸುತ್ತೇನೆ.

ಸ್ಥಳಃ ಕನಕಪುರ
ದಿನಾಂಕಃ 14.05.2026

(ರವಿಪ್ರಕಾಶ್ ಟಿ .ಆವಿನ್)
ಮೂರನೇ ಅಪರ ದಿವಾಣಿ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ.. ದಂ. ಕನಕಪುರ.

ಆರೋಪಿತನ ಸಹಿ: